# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ.

ಸಿ.ಸಿ. ನಂ.4/2020

CW-2/PW-2

| | | |
|---|---|---|
| ಹೆಸರು | : | ರಂಗಸ್ವಾಮಿ |
| ತಂದೆಯ ಹೆಸರು | : | ವೇದಮೂರ್ತಿ |
| ವಯಸ್ಸು | : | 29 ವರ್ಷ |
| ವೃತ್ತಿ | : | ವ್ಯಾಪಾರ |
| ವಾಸ ಸ್ಥಳ | : | ಮಾಗಡಿ ರಸ್ತೆ, ಬೆಂಗಳೂರು |
| ದಿನಾಂಕ | : | 29-01-2026 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಸಾಕ್ಷಿಗೆ ದಿನಾಂಕ 30.05.2019ರ ಅಮಾನತು ಪಂಚನಾಮೆಯ ದೃಢೀಕೃತ ಪ್ರತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಸದರಿ ಪಂಚನಾಮೆಯ ದೃಢೀಕೃತ ಪ್ರತಿಯನ್ನು ನಿಪಿ-6 ಎಂದು, ನನ್ನ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಿರುತ್ತೇನೆ. ದಿನಾಂಕ 30.05.2019ರಂದು ಪೊಲೀಸರು ನನ್ನನ್ನು ಚಿಕ್ಕಪೇಟೆಯಲ್ಲಿರುವ ಚಿನ್ನದ ಅಂಗಡಿಯ ಬಳಿ ಕರೆದುಕೊಂಡು ಹೋಗಿ ಚಿನ್ನದ ಅಂಗಡಿಗೆ ಹೋಗಿ ಅಲ್ಲಿ ಒಡವೆಗಳನ್ನು ಇಟ್ಟು ಫೋಟೋ ತೆಗೆದರು. ನಂತರ ಠಾಣೆಗೆ ವಾಪಸ್ ಕರೆದುಕೊಂಡು ಬಂದರು. ಅಂಗಡಿಯ ಬಳಿ ಪೊಲೀಸರು ಮಹಜರ್ ಮಾಡಿದರು. ನನ್ನ ಜೊತೆ ಸಿದ್ದಲಿಂಗಪ್ಪ ಎಂಬುವವರು ಮಹಜರ್ ಗೆ ಸಹಿ ಹಾಕಿದರು. ಫೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಫೋಟೋವನ್ನು ಈಗ ನಿಪಿ-7 ಎಂದು ಗುರುತಿಸಿರುತ್ತೇನೆ. ನಾವಲ್ಲದೇ ಇನ್ನೂ 4-5 ಜನ ಬಂದಿದ್ದರು. ನ್ಯಾಯಾಲಯದ ಮುಂದೆ ವಿ.ಸಿ ಮುಖಾಂತರ ಹಾಜರುಪಡಿಸಿರುವ ಆರೋಪಿಯನ್ನು ನಾನು ನೋಡಿಲ್ಲ, ಕಾರಣ ಸುಮಾರು ವರ್ಷಗಳಾಗಿವೆ.

<u>ಸಿ.ಸಿ. ನಂ.4/2020ರಲ್ಲಿ</u>
CW-2/PW-2

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>

ಮೇಲೆ ಹೇಳಿದ ಜುವೆಲ್ಲರಿ ಅಂಗಡಿಯ ಬಳಿ ಆರೋಪಿ ಪೊಲೀಸರು ಹಾಗೂ ನಿಮ್ಮನ್ನು ಕರೆದುಕೊಂಡು ಹೋಗಿ ಈಗ್ಗೆ ಎರಡು ತಿಂಗಳ ಹಿಂದೆ ಹಾಗೂ 20 ದಿನಗಳ ಹಿಂದೆ ನಿಮಗೆ ನಾನು ಮಾರಾಟ ಮಾಡಿರುವ ಚಿನ್ನದ ಸರಗಳನ್ನು ಹಾಜರುಪಡಿಸಿ ಎಂದು ಆರೋಪಿ ಅಂಗಡಿಯ ಮಾಲೀಕರಿಗೆ ತಿಳಿಸಿದ ಮೇರೆಗೆ ಅಂಗಡಿಯ ಮಾಲೀಕರು 28 ಗ್ರಾಂ ತೂಕದ ಚಿನ್ನದ ಸರವನ್ನು ಹಾಗೂ ಇತರೆ ಒಡವೆಗಳನ್ನು ಪೊಲೀಸರ ಮುಂದೆ ಹಾಜರುಪಡಿಸಿದರು, ಅದನ್ನು ಪೊಲೀಸರು ಜಪ್ತಿ ಮಾಡಿಕೊಂಡರು ಎಂದರೆ ಸಾಕ್ಷಿಯು ಅಪ್ಟು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಸಂಬಂಧಪಟ್ಟ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿ ಪರಃ-</u>

ಶ್ರೀ ಮುರಳಿ, ವಕೀಲರು ಹಾಜರಾಗಿ ಕಾರಾಗೃಹದ ಅಧಿಕಾರಿಗಳ ಮುಂದೆ ಆರೋಪಿ ಖಾಸಗಿ ವಕೀಲರನ್ನು ನೇಮಿಸಿಕೊಂಡಿರುವುದಾಗಿ ಪತ್ರ ಬರೆದಿದ್ದು, ಅದರ ಪ್ರತಿಯನ್ನು ಡಿ.ಎಲ್.ಎಸ್.ಎ.,ನಿಂದ ನನಗೆ ಕಳುಹಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

ಆರೋಪಿಯು ಗಿರೀಶ್ ಎಂಬ ವಕೀಲರನ್ನು ನೇಮಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಆರೋಪಿಯ ಪರವಾಗಿ ಯಾವುದೇ ವಕೀಲರು ವಕಾಲತ್ ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲವೆಂದು

ತೆಗೆದುಕೊಳ್ಳಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.